# ಸೀರೆ– ಸೂಟ್

ಮಹಿಳಾ ದಿನಾಚರಣೆ ಸಂದರ್ಭದಲ್ಲಿ ಮೈಸೂರಿನ ರಂಗಾಯಣದಲ್ಲಿ ಹೊಸರೀತಿಯ ಸ್ತ್ರೀರೂಪಕಗಳನ್ನು ರಂಗಭೂಮಿಗೆ ತರುವ ಸಾಧ್ಯತೆ ಕುರಿತಾದ ಸಂವಾದಗಳುನಡೆದವು. ಸಂಗೀತ ಕ್ಷೇತ್ರದಲ್ಲಿ ಹಲವು ಪ್ರಯೋಗ ಮಾಡಿರುವ ರೂಮಿ ಹರೀಶ್, ಲಿಂಗಸಂಬಂಧಿತ ತೊಡಕುಗಳಲ್ಲಿ ಜೀವಿಸುವ **Transgender** ಸಮುದಾಯ ತೊಡಗಿಸಿಕೊಂಡ ರಂಗ ಸಾಧ್ಯತೆಗಳ ಬಗ್ಗೆ ಗಮನ ಸೆಳೆದರು. ತಮ್ಮ ತಮ್ಮ ಸಮಸ್ಯೆಗಳೊಂದಿಗೆ ಎಲ್ಲಾ ಭಾಗಗಳಿಂದ ಬಂದು ಒಂದೆಡೆ ಸೇರಿದ, ಹಲವು ಭಾಷೆಗಳನ್ನಾಡುವ ಈ ಸಮುದಾಯ ನಾಟಕವನ್ನೊಂದನ್ನು ಪ್ರದರ್ಶಿಸಲು ಹೊರಟಾಗ ಉಂಟಾಗುವ ಸಮಸ್ಯೆ ಹಾಗೂ ಸಾಧಿಸಿದ ಯಶಸ್ಸಿನ ಬಗ್ಗೆ ಗಮನ ಸೆಳೆದರು. ಲೇಖಾ ನಾಯ್ಡು ನಟಿಯಾಗಿ, ಹಲವು ವೇದಿಕೆಗಳಿಗೆ ಡಿಸೈನರ್ ಆಗಿ ತಮ್ಮ ಅನುಭವ ಹಂಚಿಕೊಂಡರು.

ನಿರ್ದೇಶಕಿ, ನಾಟಕಕಾರ್ತಿ ಶರಣ್ಯ, ಪುರುಷರ ಕಲೆ ಎಂದೇ ನಂಬಿದ ಯಕ್ಷಗಾನವನ್ನು ಬನ್ನಂಜೆ ಸಂಜೀವ ಸುವರ್ಣ ಅವರಿಂದ ಕಲಿತಿದ್ದಾರೆ. ಶರಣ್ಯ ತಮ್ಮ 'ಅಕ್ಷಯಾಂಬರ' ನಾಟಕದ ಮೂಲಕ 'ದ್ರೌಪದಿಯ ವಸ್ತ್ರಾಪಹರಣ' ಪ್ರಸಂಗವನ್ನು ಗಂಡು ಮತ್ತು ಹೆಣ್ಣಿನ ವಸ್ತ್ರಗಳ ಬದಲಾವಣೆ ಮೂಲಕ ಪರೀಕ್ಷಿಸುವ ಪ್ರಯತ್ನ ಮಾಡಿದ್ದಾರೆ. ಇಲ್ಲಿನ ದ್ರೌಪದಿ ವೇಷಧಾರಿ ಗಂಡಾಗಿದ್ದರೆ ತಾವೇ ದುಶ್ಶಾಸನನ ಪಾತ್ರವನ್ನು ಹೆಣ್ಣುಡುಗೆಯಲ್ಲಿ ನಿರ್ವಹಿಸಿದ್ದಾರೆ. ದುಶ್ಶಾಸನನಾಗಿ ಸೀರೆ ಸೆಳೆಯುವ ಪ್ರಸಂಗವನ್ನು ಅದ್ಭುತವಾಗಿ ನಿರ್ವಹಿಸಿದ್ದಾರೆ. ಹೆಣ್ಣು ವೇಷಧಾರಿ ದುಶ್ಶಾಸನನೇ ದ್ರೌಪದಿ ವೇಷ ಧರಿಸಿದ ಗಂಡಿನ ಸೀರೆ ಸೆಳೆಯುವ ಪ್ರಸಂಗ ಮನಸ್ಸಿನೊಳಗಿನ ಗಂಡುಭಾವ, ಹೆಣ್ಣು ಭಾವವನ್ನು ಪಲ್ಲಟಗೊಳಿಸುವ ಮೂಲಕ ಅರಿಯುವ ಸಾಧ್ಯತೆಯೆನ್ನುವುದು ನಿಜ. ಆದರೆ ಸೀರೆಯೆನ್ನುವುದು ಹೆಣ್ಣಿನ ರೂಪಕವಲ್ಲವೇ. ಗಂಡಾಗಲೀ ಹೆಣ್ಣಾಗಲೀ ಸೆಳೆಯಲ್ಪಡುವುದು ಸೀರೆಯೇ ಅಲ್ಲವೇ ಎಂಬ ಪ್ರಶ್ನೆ ಹಾಗೇ ಉಳಿದುಬಿಡುತ್ತದೆ. ವೇಷ ಬದಲಾದ ಮಾತ್ರಕ್ಕೆ ವ್ಯಕ್ತಿತ್ವ ಬದಲಾಗಬಲ್ಲುದೇ ಎಂಬ ಜಿಜ್ಞಾಸೆ ನೋಡುಗರಲ್ಲಿ ಉಳಿಯುತ್ತದೆ.

ಮಹಿಳಾ ದಿನ ಹೆಣ್ಣನ್ನು ಹೊಗಳುವುದು, ಹಾಡಿ ಅಟ್ಟಕ್ಕೇರಿಸುವಷ್ಟರಲ್ಲೇ ಅದರ ಉದ್ದೇಶವನ್ನು ಕಳೆದುಕೊಂಡುಬಿಡುತ್ತದೆ. ಇದರ ಹಿಂದೆ ಕ್ಲಾರಾ ಜೆಟ್ಕಿನ್ ಹಾಗೂ ಅವಳ ಗೆಳತಿ ರೋಸಾ ಲಕ್ಸೆಂಬರ್ಗ್ ಅವರ ನಿರಂತರ ಹೋರಾಟ ಪರಿಶ್ರಮಗಳಿವೆ. ಲಿಂಗ ಸಮಾನತೆ, ಮತದಾನದ ಹಕ್ಕಿಗಾಗಿ ನಡೆದ ಜಾಗತಿಕ ಹೋರಾಟ ನಡೆಸಿದ ಈ ಮಹಾನ್ ಹೋರಾಟದಿಂದಾಗಿಯೇ ಇಂದು ಮಹಿಳೆಯರು ಮಾತನಾಡುವ, ಧ್ವನಿಯೆತ್ತುವ, ಹೋರಾಟ ಮಾಡುವ ಶಕ್ತಿ ಪಡೆದಿದ್ದಾರೆ.

ಈ ಕಾಲಘಟ್ಟದಲ್ಲಿಯೇ ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದನೀತಿಯ ವಿರುದ್ಧದ ಹೋರಾಟಗಳು ಆರಂಭವಾಗಿದ್ದವು. ಆಗ ಆರ್ಥರ್ ಪ್ಯುಗಾಡ್9ನ 'ದ ಕೋಟ್' ಎನ್ನುವ ಸಣ್ಣಕತೆಯೊಂದು ಪ್ರಕಟವಾಯಿತು. ನಾಟಕಕಾರನಾಗಿ ಗುರ್ತಿಸಿಕೊಂಡಿದ್ದ ಪ್ಯುಗಾರ್ಡ್ ಸರ್ಪೆಂಟ್ ಎನ್ನುವ ತಂಡದೊಂದಿಗೆ ನಾಟಕದ ತಯಾರಿಯಲ್ಲಿದ್ದಾಗ ಈ ಕತೆಯನ್ನು ಕೇಳುತ್ತಾನೆ. ವರ್ಣಭೇದದ ವಿರುದ್ಧ ಅಸಂಘಟಿತ ಹೋರಾಟದಲ್ಲಿ ತೊಡಗಿಸಿದ್ದ ಪ್ಯುಗಾಡ್9 ತಾನು ಕೇಳಿದ ಕತೆಯನ್ನು ನಾಟಕವನ್ನಾಗಿಸುತ್ತಾನೆ. ಆ ಕತೆಯಲ್ಲಿ ವಯಸ್ಸಾದ ವ್ಯಕ್ತಿಯೊಬ್ಬ ತಾನು ಮಾಡಿದ ಯಾವುದೋ ತಪ್ಪಿನಿಂದಾಗಿ 10 ವರ್ಷ ಜೈಲಿಗೆ ಹೋಗುವ ಸಂದರ್ಭ ಬರುತ್ತದೆ. ತಾನು ಬರುವವರೆಗೆ ತನ್ನ ಪ್ರತಿನಿಧಿಯಾಗಿ ಕೋಟನ್ನು ಹೆಂಡತಿ ಕಾಪಾಡಿ ಇಟ್ಟುಕೊಳ್ಳಬೇಕೆಂದು ಹೇಳಿ ಅದನ್ನು ತನ್ನ ಮನೆಗೆ ಕಳಿಸುತ್ತಾನೆ. ಮನೆಯಲ್ಲಿನ ಜನ ಅದನ್ನು ಹೇಗೆ ಇಟ್ಟರೆ ಸೂಕ್ತ, ಎಲ್ಲಿ ಇಡಬೇಕು, ಹೇಗೆ ಇಡಬೇಕು ಎಂಬುದನ್ನು ಚರ್ಚೆಮಾಡುತ್ತಾರೆ. ಈ ಚರ್ಚೆ ರಂಗದ ಮೇಲೆ ಅಭಿನಯಿಸಲ್ಪಡುತ್ತದೆ.

ಪ್ಯುಗಾರ್ಡನ ಉದ್ದೇಶವಿದ್ದುದು ಗುಲಾಮಗಿರಿ ಹೇಗೆ ಹಂತಹಂತವಾಗಿ ಹೇರಲಾಗುತ್ತದೆ ಎಂಬುದನ್ನು ರಾಜಕಾರಣದ ಹಿನ್ನೆಲೆಯಲ್ಲಿ ತನ್ನ ಜನಾಂಗದ ಮುಂದೆ ತೋರಿಸುವುದಾಗಿತ್ತು. ಒಂದು ವೇಳೆ ಪ್ರಭುತ್ವ ತಾನೆ ನೇರವಾಗಿ ಶೋಷಿತರನ್ನು ನಿಯಂತ್ರಿಸಲಾಗದಿದ್ದರೆ ತನ್ನ ಪ್ರತಿನಿಧಿಯನ್ನು ಆ ಜಾಗದಲ್ಲಿ ಹೇಗೆ ಬೆದರುಗೊಂಬೆಯಾಗಿ ಕೂಡಿಸುತ್ತದೆ ಎಂಬುದನ್ನು ಹೇಳಲು ಈ ಕೋಟಿನ ರೂಪಕವನ್ನು ಬಳಸಿಕೊಳ್ಳುತ್ತಾನೆ. ಇಂತಹದ್ದೇ ಲೈಂಗಿಕ ರಾಜಕಾರಣ ಪ್ರೇರಿತ ನಾಟಕವನ್ನು ಕೆನ್ ತೆಂಬಾ ಬರೆಯುತ್ತಾರೆ. ಇದೂ ವ್ಯವಸ್ಥೆಯಲ್ಲಿ ಎರಡನೆಯ ಪ್ರಜೆಯಾದ ಹೆಣ್ಣಿನ ಮೇಲಿನ ದೌರ್ಜನ್ಯವನ್ನು ಕಟ್ಟಿಕೊಡುವಂತಹ ನಾಟಕ. ದಾಂಪತ್ಯ ವ್ಯವಸ್ಥೆ ಗಂಡು– ಹೆಣ್ಣು ಒಬ್ಬರಿಗೊಬ್ಬರು ಪರಸ್ಪರ ನಿಷ್ಠರಾಗಿರಬೇಕೆಂದು ನಿರೀಕ್ಷಿಸುತ್ತದೆ. ಆದರೆ, ಪುರುಷ ಸಬಲನಾದ್ದರಿಂದ ತಕ್ಕಡಿ ಅವನ ಕಡೆಗೆ ಹೆಚ್ಚು ಬಾಗುತ್ತದೆ. ದಾಂಪತ್ಯದ್ರೋಹ ಗಂಡಿನಿಂದ ನಡೆದರೆ ಅದು ಗಣನೀಯವಲ್ಲ. ಏಕೆಂದರೆ ಅವನು ಹೆಂಡತಿಗೆ ಅನಿವಾರ್ಯ. ಅದರೆ ದ್ರೋಹವೆಸಗಿದ ಹೆಂಡತಿ ಗಂಡನಿಗೆ ಅನಿವಾರ್ಯವಲ್ಲವಲ್ಲ. ಈ ಇಬ್ಬಗೆಯ ನ್ಯಾಯದ ಬಗ್ಗೆ ಕೆನ್ ತೆಂಬಾ ನಾಟಕ ಬರೆದರೆ, ಪ್ರಖ್ಯಾತ ನಿರ್ದೇಶಕ ಪೀಟರ್ ಬ್ರೂಕ್ ನಿರ್ದೇಶನದ ಮೂಲಕ ಚರ್ಚೆಗೆ ಎತ್ತಿಕೊಳ್ಳುತ್ತಾನೆ.

ಮೆಟಿಲ್ಡಾ ಮತ್ತು ಫಿಲೋಮಿನ ಇಬ್ಬರೂ ಲೋಕದ ಕಣ್ಣಿನಲ್ಲಿ ಪರಸ್ಪರ ಪ್ರೀತಿಸುವ ದಂಪತಿ. ಮಕ್ಕಳನ್ನು ಪಡೆಯಲಾಗದ ಅಸಹಾಯಕರು. ಫಿಲೋಮಿನ ವೃತ್ತಿಯಿಂದ ವಕೀಲ. ಒಂದು ದಿನ ಅವನು ಮನೆಗೆ ಬಂದಾಗ ಮೆಟಿಲ್ಡಾ ಪ್ರಿಯಕರನೊಂದಿಗೆ ಹಾಸಿಗೆಯಲ್ಲಿರುವುದನ್ನು ನೋಡುತ್ತಾನೆ. ಹೆದರಿದ ಆ ವ್ಯಕ್ತಿ ತನ್ನ ಸೂಟನ್ನು ಅಲ್ಲೇ ಬಿಟ್ಟು ಓಡುತ್ತಾನೆ. ಹತಾಶೆ, ಸಿಟ್ಟಿನೊಂದಿಗೆ ಕುದಿದ ಅವನು ಅವಳಿಗೆ ಕೊಟ್ಟ ಶಿಕ್ಷೆಯೆಂದರೆ ಸದಾ ಕಾಲ ಅವಳು ಆ ಕೋಟಿನೊಂದಿಗೆ ಇರಬೇಕು, ಅದರೊಂದಿಗೆ ಮಾತನಾಡಬೇಕು. ಆ ಕೋಟಿನ ಒಡೆಯ ತನ್ನೊಂದಿಗೆ ಇದ್ದಾನೆಂದು ಭಾವಿಸಿ ನಡೆಯಬೇಕು. ಆ ಕೋಟಿನವನಿಗಾಗಿ ಡೈನಿಂಗ್ ಟೇಬಲ್‌ನಲ್ಲಿ ಊಟಬಡಿಸಬೇಕು. ಎಲ್ಲಿ ಹೋದರೂ ಅದನ್ನು ಹೊತ್ತು ತಿರುಗಬೇಕು. ಹೀಗೆ ತನ್ನ ಶಿಲುಬೆಯನ್ನು ತಾನೇ ಹೊತ್ತು ನಡೆವ ಶಿಕ್ಷೆಯದಾಗಿತ್ತು.

ನಾಟಕದಲ್ಲಿ ಗಂಡ ಹೆಂಡತಿ ಇಬ್ಬರೇ ಇದ್ದರೂ ಕೋಟ್ ಮೂರನೇ ಪಾತ್ರವೆಂಬಂತೆ ಚಿತ್ರಿಸಲ್ಪಡುತ್ತದೆ. ಹತಾಶೆ, ಅಸಹಾಯಕತೆ, ತಪ್ಪಿತಸ್ಥ ಭಾವದಿಂದ ದಿನೇದಿನ ಮೆಟಿಲ್ಡಾ ಕುಸಿಯಲಾರಂಭಿಸುತ್ತಾಳೆ. ಒಂದು ದಿನ ಮನೆಗೆ ಅತಿಥಿಗಳು ಬಂದಾಗ ಅವರ ಜೊತೆ ಆ ಸೂಟ್ ಹಾಕಿದ ಚೇರ್ ಮುಂದೆ ಅವರೆಲ್ಲರಿಗೂ ಕಾಣುವಂತೆ ಅವಳು ಊಟ ಬಡಿಸುತ್ತಾಳೆ. ಬಡಿಸಲಿಲ್ಲವೆಂದರೆ ಗಂಡ ಬಿಡುವುದಿಲ್ಲ ಎಂದು ಅವಳಿಗೆ ತಿಳಿದಿತ್ತು. ಅವರೆಲ್ಲರ ಕುತೂಹಲಕ್ಕೆ ಅವಳೇ ಉತ್ತರ ನೀಡಲಿ ಎಂಬ ಉದ್ದೇಶ ಅವನದಾಗಿತ್ತು. ಮೂಲಕತೆಯಲ್ಲಿ ಅವಳು ಅಪಮಾನದ ಬದುಕನ್ನು ನಡೆಸಲಾರದೆ ಸವೆಯುತ್ತಾ ಬದುಕು ಮುಗಿಸುತ್ತಾಳೆ. ಬ್ರೂಕ್ ಈ ನಾಟಕದ ಕತೆಯ ಸಾಂಕೇತಿಕತೆಯನ್ನು ಯಶಸ್ವಿಯಾಗಿ ಬಳಸಿಕೊಳ್ಳುತ್ತಾನೆ. ದಕ್ಷಿಣ ಆಫ್ರಿಕಾದ ಹಿಂದುಳಿದ ಜನಾಂಗಗಳಲ್ಲಿ ಹೆಣ್ಣಿನ ಪಾವಿತ್ರ್ಯದ ಬಗ್ಗೆ, ಆಚರಣೆಗಳ ಬಗ್ಗೆ ಹಲವು ಚಿತ್ರವಿಚಿತ್ರ ನಂಬಿಕೆಗಳಿದ್ದು, ನಾಟಕದಲ್ಲಿ ಅವುಗಳ ಬಗ್ಗೆ ಗಮನ ಸೆಳೆಯಲಾಗಿದೆ.

ಸೀರೆಯನ್ನು ಸೆಳೆಯುವುದಾಗಲೀ, ಗಂಡನ ಕೋಟನ್ನೂ ಮನೆಯಲ್ಲಿ ಪ್ರತಿಷ್ಠಾಪಿಸುವುದಾಗಲೀ, ಸೂಟನ್ನು ಹೊತ್ತು ತಿರುಗುವುದಾಗಲೀ ವ್ಯವಸ್ಥೆ ಹೆಣ್ಣಿನ ಮೇಲೆ ನಡೆಸುವ ಆಕ್ರಮಣವೇ ಅಲ್ಲವೇ. ಕಾಲ, ದೇಶ ಬದಲಾದರೂ ಹೆಣ್ಣು ಗಂಡು ಅನ್ನುವ ಕುಲದ ಮನಸ್ಥಿತಿ ಬದಲಾಗಿದೆಯೇ.

■ **ಅಮೃತಮತಿ**

## ಮಾತೇ ಮುತ್ತು

- ಆಡಳಿತ ಕೆಲಸವನ್ನು ಸರಿ ಮಾಡಿಸುತ್ತದೆ. ನಾಯಕತ್ವ ಸರಿಯಾದ ಕೆಲಸವನ್ನು ಮಾಡಿಸುತ್ತದೆ.

  —ಪೀಟರ್ ಡ್ರೆಕರ್

- ತಪ್ಪುಗಳನ್ನು ಹುಡುಕಬೇಡಿ; ಪರಿಹಾರಗಳನ್ನು ಹುಡುಕಿ.

  —ಹೆನ್ರಿ ಫೋರ್ಡ್

- ಹುಟ್ಟು ಹಾಕದೆ ಕುಳಿತವನಿಗೆ ಮಾತ್ರ ದೋಣಿಯಲ್ಲಿ ತೂತು ಕೊರೆಯಲು ಸಮಯವಿರುತ್ತದೆ.

  —ಜೀನ್ ಪಾಲ್ ಸಾರ್ತ್ರೆ

- ಕಣ್ಣಿದ್ದು ದೂರದೃಷ್ಟಿ ಇಲ್ಲದಿರುವುದು ,ಕುರುಡರಾಗಿರುವುದಕ್ಕಿಂತ ಕೆಟ್ಟದ್ದು.

  —ಹೆಲನ್ ಕೆಲ್ಲರ್

- ಅನುಭವ ಎಂಬ ಗುರುವಿಗೆ ನಾವು ಸಲ್ಲಿಸಬೇಕಾಗಿರುವ ದಕ್ಷಿಣೆ ಅಪಾರವಿದೆ.

  —ಫ್ರಾಂಕ್ಲಿನ್